ಶಿರಸಾವಹಿಸುವಂತಾಗಲಿ.

- ಬಾಬ್ರಿ ಮಸೀದಿ ಇದ್ದ ಜಾಗದ ಬಗೆಗಿನ ವಿವಾದ ಮತ್ತೊಮ್ಮೆ ವಿಚಾರಣೆಗೆ ಒಳಗಾಗಿ, ನ್ಯಾಯಯುತವಾಗಿ ಬಗೆಹರಿಯಲಿ. ಸುನ್ನಿ ವಕ್ಫ್ ಬೋರ್ಡಿನವರಿಗೆ ನ್ಯಾಯ ಸಿಕ್ಕಲಿ. ಈ ಬಾರಿಯ ವಿಚಾರಣೆಯಲ್ಲಿ ನಿಜಕ್ಕೂ ಸಂವಿಧಾನದ ಮೌಲ್ಯಗಳನ್ನು, ಮತ್ತು ಅಸಲಿ ವಿವೇಕವಿವೇಚನೆಯ ಶುದ್ಧತೆಯನ್ನು ಎತ್ತಿ ಹಿಡಿದಿರುವುದು ಕಾಣಲಿ.
- ಸಿಪಿಐ, ಸಿಪಿಎಮ್‌ನಂಥ ಎಡಪಕ್ಷಗಳು ದೊಡ್ಡಮಟ್ಟದಲ್ಲಿ ಚೇತರಿಸಿಕೊಳ್ಳುವ ವಿದ್ಯಮಾನವು ದೊಡ್ಡಮಟ್ಟದಲ್ಲಿಯೇ ಕಾಣಿಸಿಕೊಳ್ಳಲಿ.
- ರೊಹಿಂಗ್ಯಾ ಮುಸ್ಲಿಮರು ಮತ್ತು ಬಾಂಗ್ಲಾದೇಶದಿಂದ ಅಕ್ರಮವಾಗಿ ವಲಸೆ ಬರುತ್ತಿರುವ ಕಡುಬಡವರ ಸಮಸ್ಯೆ ಕುರಿತು, ಕ್ರಮವಾಗಿ, ಮ್ಯಾನ್ಮಾರ್ ಮತ್ತು ಬಾಂಗ್ಲಾದೇಶಗಳ ಜೊತೆ ಸಾವಧಾನವಾದ ಮಾತುಕತೆ ಆಗಿ, ಆ ಸಂತ್ರಸ್ತರಿಗೆ ಮತ್ತು ಬಡವರಿಗೆ ಅವರ ದೇಶಗಳಲ್ಲಿಯೇ ನಿಜಕ್ಕೂ ನ್ಯಾಯ ಸಲ್ಲುವಂತೆ ಅಂತರರಾಷ್ಟ್ರೀಯ ಒತ್ತಡವನ್ನು ಬೀರುವಲ್ಲಿ ಭಾರತವು ಮುಂಚೂಣಿಯಲ್ಲಿರಲಿ. ಆ ದೇಶಗಳಮೇಲೆ ನಮ್ಮ ದೇಶವು ಒತ್ತಡ ಹೇರುವುದು ಮಾತ್ರವಲ್ಲದೆ, ಹಿರಿಯಕ್ಕನಾಗಿ ಅವುಗಳಿಗೆ ನೆರವು ಮತ್ತು ಒತ್ತಾಸೆಯನ್ನು ಕೂಡ ನೀಡುವಂತಾಗಲಿ.
- ಯುಎಪಿಎ ಕಾಯ್ದೆಯ ಅಡಿ ಸೆರೆಯಾಗಿರುವ ಸುಧಾ ಭಾರದ್ವಾಜ್ ಮುಂತಾದವರು, ಮತ್ತು ಭೀಮಾಕೋರೆಗಾಂವ್ ಪ್ರಕರಣದ ಆರೋಪಿಗಳು – ಇವರೆಲ್ಲರೂ ತಮ್ಮ ಮೇಲಿನ ಖಟ್ಲೆಗಳಿಂದ ಬೇಷರತ್ ಖುಲಾಸೆಗೊಳ್ಳಲಿ.
- ಜಾರ್ಖಂಡದಲ್ಲಿ ಹತ್ತು ಸಾವಿರ ಆದಿವಾಸಿಗಳ ಮೇಲೆ ಹೂಡಿರುವ ದೇಶದ್ರೋಹದ ಆಪಾದನೆಯ ಕೇಸನ್ನು ಸರಕಾರವು ವಾಪಸ್ ತೆಗೆದುಕೊಂಡು, ಅವರ ಕ್ಷಮೆ ಕೇಳಲಿ.
- ನಮ್ಮ ರಾಜ್ಯದ ಅಂಗನವಾಡಿ ಕಾರ್ಯಕರ್ತೆಯರಿಗೆ ಸರಕಾರದ ವತಿಯಿಂದಲೂ, ಗಾರ್ಮೆಂಟ್ ಕೆಲಸಗಾರರಿಗೆ ಆ ಉದ್ಯಮದ ಮಾಲಿಕರುಗಳಿಂದಲೂ ಸಂಪೂರ್ಣ ನ್ಯಾಯ ದೊರಕಿ, ಅವರು ತಮ್ಮ ದುಡಿಮೆಗೆ ತಕ್ಕ ವೇತನ ಮತ್ತು ಸವಲತ್ತುಗಳನ್ನು ಪಡೆಯುವಂತಾಗಲಿ.
- ಜನ ಮೋಟಾರು ಗಾಡಿಗಳನ್ನು ಕೊಳ್ಳುವುದು ಕಮ್ಮಿ ಆಗಿ, ಅವುಗಳ ಉತ್ಪಾದನೆಯ ಉದ್ಯಮಕ್ಕೆ ಹೊಡೆತಬಿದ್ದಿದೆ ಎಂಬ ಸುದ್ದಿಯಿಂದ ನನಗೆ ಸಂತೋಷವೇ ಆಗಿದೆ! ಆ ಉದ್ಯಮ ಬಹಳವಾಗಿ ಚೇತರಿಸಿಕೊಳ್ಳದಿರಲಿ. ಮೋಟಾರುಗಾಡಿಗಳ ಉತ್ಪಾದನೆ ತೀರ ಕಮ್ಮಿಯಾಗಲಿ. ಆದರೆ, ಅಲ್ಲಿನ ಕೆಲಸಗಾರರಿಗೆ ಬೇರೆ ಕೆಲಸಗಳು ಸಿಕ್ಕುವ ವ್ಯವಸ್ಥೆಯಾಗಲಿ. ಜೊತೆಗೆ, ಬಸ್ಸು, ರೈಲ್ವೇ ಮತ್ತು ಮೆಟ್ರೋಗಳ ವ್ಯವಸ್ಥೆಗಳು ಹತ್ತು,ಇಪ್ಪತ್ತು ಪಟ್ಟು ಬೆಳೆಯುವತ್ತ ದೊಡ್ಡಹೆಜ್ಜೆಗಳು ಮೂಡುವಂತಾಗಲಿ.
- ಎತ್ತಿನಹೊಳೆ ಯೋಜನೆ ಸಂಪೂರ್ಣ ರದ್ದಾಗಲಿ. ನಾಡಿನಾದ್ಯಂತ, ಅದರಲ್ಲಿಯೂ ಬೆಂಗಳೂರು ಜಿಲ್ಲೆಯಲ್ಲಿ, ಕೆರೆಗಳೆಲ್ಲ ಚೊಕ್ಕವಾಗಲಿ. ಬೆಂಗಳೂರಿಗರಿಗೆ ಕುಡಿಯುವ ನೀರು, ಮತ್ತು ಬೇರೆ ಬಳಕೆಗಾಗಿ ನೀರು, ಇವುಗಳ ಬಹುಭಾಗ ಜಿಲ್ಲೆಯ ಕೆರೆಗಳಿಂದಲೇ ಸಿಕ್ಕಬೇಕು ಎಂಬ ಸಂಕಲ್ಪವು ಬರುವ ವರ್ಷದಲ್ಲಿಯಾದರೂ ಮೂಡಲಿ.
- ಕೆಸಿ ವ್ಯಾಲಿ ಯೋಜನೆ ಸಂಪೂರ್ಣ ರದ್ದಾಗಲಿ. ಬೆಂಗಳೂರಿನ ಜನ, ಬೆಂಗಳೂರು ನಗರ, ಹಾಗೂ ಜಿಲ್ಲಾಡಳಿತಗಳು ತಮ್ಮ ಎಲ್ಲ ಬಗೆಯ ಉಚ್ಛಿಷ್ಟದ ಪರಿಣಾಮವನ್ನು ತಾವೇ ಹೊತ್ತುಕೊಂಡು, ಅದರ ಕಷ್ಟಸುಖಗಳನ್ನು ತಾವೇ ಭೋಗಿಸುವಂತಾಗಲಿ.
- ನಮ್ಮ ರಾಜ್ಯದಲ್ಲಿ ತಲೆಗೊಂದರಂತೆ ತಲೆಯೆತ್ತಿರುವ ವಿಷಯಕೇಂದ್ರಿತ ವಿಶ್ವವಿದ್ಯಾಲಯಗಳು ತಮಗಿರುವ ವಿಶ್ವವಿದ್ಯಾಲಯ ಎಂಬ ಪಟ್ಟವನ್ನು ಕಳೆದುಕೊಳ್ಳಲಿ. ಅವುಗಳು ಕೇವಲ ಅಧ್ಯಯನ ಸಂಸ್ಥೆಗಳಾಗಿ, ಸಂಶೋಧನ ಸಂಸ್ಥೆಗಳಾಗಿ ಮಾರ್ಪಡಲಿ. ಆದರೆ, ಅದರಿಂದ ಈಗ ಅವುಗಳಲ್ಲಿ ಕೆಲಸಮಾಡುತ್ತಿರುವವರ ಸಂಬಳ ಸಾರಿಗೆಗೆ ತೊಂದರೆಯಾಗದಿರಲಿ. ಅವುಗಳ ಕುಲಪತಿಗಳಿಗೆ ತೊಂದರೆಯಾಗಲಿ, ಬೇಕಾದರೆ!
- ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರವು ಊರ್ಜಿತಗೊಳ್ಳಲಿ. ಅದನ್ನು ಶಾಸ್ತ್ರೀಯ ಎಂದು ಕರೆಯದೆ, ಅಭಿಜಾತ ಎಂದು ನಾವು ಕರೆಯುವಂತಾಲಿ. ಎಲ್ಲ ಹಳಗನ್ನಡ, ನಡುಗನ್ನಡ ಕೃತಿಗಳು, ಹಾಗೂ ಕಾಪಿರೈಟ್ ತೀರಿರುವ ಅರ್ವಾಚೀನ ಮತ್ತು ಆಧುನಿಕ ಕೃತಿಗಳೆಲ್ಲವೂ, ಅಂತರ್ಜಾಲದಲ್ಲಿ ಯೂನಿಕೋಡ್‌ನಲ್ಲಿ, ಸರ್ಚಬಲ್ ಆಗಿ ಲಭ್ಯವಾಗುವಂತಾಗಲಿ.
- ನಮ್ಮ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳು ಮತ್ತೆ ತಲೆದೋರಲಿ. ಆ ವಿದ್ಯಾರ್ಥಿ ಸಂಘಗಳು ಮತ್ತು ನಮ್ಮ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಅಧ್ಯಾಪಕರ ಸಂಘಗಳು ಪ್ರಖರವಾದ ಸಮಾಜವಾದೀ ಆಶಯಗಳುಳ್ಳವರ ನೇತೃತ್ವದಲ್ಲಿರಲಿ, ಸಮಾಜವನ್ನು ಎಚ್ಚರಿಸಲಿ. ಸಮಾಜವಾದೀ ರಾಜಕೀಯ ಪ್ರಜ್ಞೆಯಿಲ್ಲದಿರುವ, ತೀವ್ರ ತತ್ತ್ವಶೋಧ ಮಾಡದಿರುವ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಇರುವ ಸಮಾಜವೊಂದು ದರಿದ್ರ ಸಮಾಜವೇ ಹೌದಲ್ಲವೇ?
- ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಡೊನಾಲ್ಡ್ ಟ್ರಂಪ್ ಅಲ್ಲಿನ ಸದನಗಳ ಬಿಗಿಯಾದ ವಾಗ್ದಂಡನೆಗೆ ಗುರಿಯಾಗಿ, ಅಧ್ಯಕ್ಷ ಪಟ್ಟದಿಂದ ತೊಲಗುವಂತಾಗಲಿ. 2020ರ ನವೆಂಬರ್‌ನಲ್ಲಿ ಅಲ್ಲಿ ಜರುಗಲಿರುವ ಚುನಾವಣೆಯಲ್ಲಿ ಬರ್ನೀ ಸ್ಯಾಂಡರ್ಸ್ ಇಲ್ಲವೆ ಎಲಿಜಬೆಥ್ ವಾರೆನ್ – ವಿಶೇಷವಾಗಿ, ಸ್ಯಾಂಡರ್ಸ್ ಗೆದ್ದು ಬರುವಂತಾಗಲಿ. ಲ್ಯಾಟಿನ್ ಅಮೇರಿಕದಲ್ಲಿ ಮತ್ತೆ ಸಮಾಜವಾದೀ ಸರಕಾರಗಳು ಬಲಗೊಳ್ಳುವಂತಾಗಲಿ. ಸೌದಿ ಅರೇಬಿಯಾದ ರಾಜಮನೆತನ ಮತ್ತು ಅವರ ವಹಾಬಿ ಆಡಳಿತಗಳ ಪತನವಾಗಿ, ಅಲ್ಲಿ ನಿಜಕ್ಕೂ ಉದಾರವಾದಿಯಾದ ಪ್ರಜಾಪ್ರಭುತ್ವ ನೆಲಸುವಂತಾಗಲಿ. ಇನ್ನು, ಆಫ್ರಿಕಾ... ನನಗೀಗ ಮಾತು ಸೋಲುತ್ತದೆ. ಆ ನತದೃಷ್ಟ, ದುಃಖತಪ್ತ ಭೂಭಾಗದಲ್ಲಿ ಶಾಂತಿ ಮತ್ತು ಸಮೃದ್ಧತೆಗಳು ನೆಲಸುವತ್ತ ಮೊದಲ ಹೆಜ್ಜೆಗಳು ಮೂಡುವಂತಾಗಿ, ಅದಕ್ಕೆ ಜಗತ್ತಿನ ಉಳಿದೆಲ್ಲ ದೇಶಗಳು (ವಿಶೇಷವಾಗಿ ಯೂರೋಪ್ ಹಾಗೂ ಉತ್ತರ ಅಮೆರಿಕೆಯ ದೇಶಗಳು) ಬಾಧ್ಯವಾಗಲಿ. ■


